5

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ    ದಿನಾಂಕ : DATE : 30-5-202

# ಶಾಸಕ, ಸಚಿವರ ಶೇ.30ರಷ್ಟು ವೇತನ ಕಡಿತ

## ಕೆಲವು ಸ್ಪಷ್ಟನೆ ನೀಡಿ ಸರ್ಕಾರದಿಂದ ಹೊಸ ಆದೇಶ । ಏ.1ರ ನಿರ್ಧಾರದಲ್ಲಿ ಗೊಂದಲ ಇದ್ದವು

**ಬೆಂಗಳೂರು:** ಕೋವಿಡ್ 19 ಪರಿಹಾರ ನಿಧಿಗಾಗಿ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ವಿಧಾನಮಂಡಲದ ಇತರೆ ಎಲ್ಲಾ ಪದಾಧಿಕಾರಿಗಳ ವೇತನ ಮತ್ತು ಭತ್ಯೆಯಲ್ಲಿ (ಪ್ರಯಾಣ ಮತ್ತು ದಿನ ಭತ್ಯೆ ಹೊರತುಪಡಿಸಿ) ಶೇ. 30ರಷ್ಟು ಕಡಿತ ಮಾಡುವಂತೆ ಸ್ಪಷ್ಟೀಕರಣ ನೀಡಿ ರಾಜ್ಯ ಸರ್ಕಾರ ಆದೇಶ ಮಾಡಿದೆ.



2020 ಏಪ್ರಿಲ್ 1ರಿಂದ ಮುಂದಿನ ಒಂದು ವರ್ಷದ ಅಂದರೆ 2021 ಮಾರ್ಚ್‌ವರೆಗೆ ವಿಧಾನ ಸಭಾಧ್ಯಕ್ಷರು, ಉಪ ಸಭಾಧ್ಯಕ್ಷರು, ಸಭಾಪತಿ ಮತ್ತು ಉಪಸಭಾಪತಿಗಳನ್ನೂ ಒಳಗೊಂಡು ವಿಧಾನಮಂಡಲದ ಎಲ್ಲ ಸದಸ್ಯರು, ಸಚಿವರು ಹಾಗೂ ಪದಾಧಿಕಾರಿಗಳ ವೇತನ ಮತ್ತು ಭತ್ಯೆಯಲ್ಲಿ ಶೇ.30ರಷ್ಟು ಕಡಿತಗೊಳಿಸಲು ಏಪ್ರಿಲ್ ತಿಂಗಳ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಇದಕ್ಕಾಗಿ ಕರ್ನಾಟಕ ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಸಚಿವರ ಸಂಬಳಗಳ ಅಧಿನಿಯಮ 1956ಕ್ಕೆ ತಿದ್ದುಪಡಿ ತಂದು ಸುಗ್ರೀವಾಜ್ಞೆ ಯನ್ನೂ ಹೊರಡಿಸಲಾಗಿತ್ತು.

ಆದರೆ, ಆ ನಂತರ ಕೆಲ ಗೊಂದಲಗಳು ಉಂಟಾಗಿ, ಅನುಬಂಧ 1ರಡಿ ಭರುವ ಭತ್ಯೆಗಳಷ್ಟೇ ಅಲ್ಲದೆ, ಅನುಬಂಧ 2ರಡಿ ಬರುವ ಭತ್ಯೆಗಳಲ್ಲೂ ಶೇ.30ರಷ್ಟು ಭತ್ಯೆ ಕಡಿತ ಮಾಡಬೇಕೆ ಎಂದು ವಿಧಾನ ಪರಿಷತ್ ಕಾರ್ಯದರ್ಶಿ ಅವರು ಸರ್ಕಾರಕ್ಕೆ ಸ್ಪಷ್ಟನೆ ಕೇಳಿದ್ದರು. ಈ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಸ್ಪಷ್ಟನೆ ಪಡೆದು ಇದೀಗ ಇಲಾಖೆಯು ಸ್ಪಷ್ಟೀಕರಣದ ಆದೇಶ ಪ್ರಕಟಿಸಿದ್ದು, ಪ್ರಯಾಣ ಮತ್ತು ದಿನ ಭತ್ಯೆ ಹೊರತು ಪಡಿಸಿ ಉಳಿದೆಲ್ಲಾ ಭತ್ಯೆ ಮತ್ತು ವೇತನದಲ್ಲಿ ಶೇ.30ರಷ್ಟು ಕಡಿತ ಮಾಡುವಂತೆ ಆದೇಶ ಮಾಡಿದೆ.

### ವೇತನ-ಭತ್ಯೆ ಎಷ್ಟು? ಕಡಿತ ಎಷ್ಟು?

ಒಬ್ಬ ಶಾಸಕರ ತಿಂಗಳ ವೇತನ 25,000 ರು. ಇದೆ. ಆದಕ್ಕೆ ಕ್ಷೇತ್ರ ಭತ್ಯೆ 40,000 ರು., ಕ್ಷೇತ್ರ ಪ್ರವಾಸ ಭತ್ಯೆ 40,000 ರು., ಪಿಎ/ರೂಂ ಬಾಯ್ ಭತ್ಯೆ 10,000 ರು., ದೂರವಾಣಿ ಭತ್ಯೆ 20,000 ರು., ಅಂಚೆ ಮತ್ತು ಸ್ಟೇಷನರಿ ಭತ್ಯೆ 5000 ರು. ಇರುತ್ತದೆ. ಹೀಗೆ ಒಟ್ಟು 1.40 ಲಕ್ಷ ರು. ಆಗುತ್ತದೆ. ಒಬ್ಬ ಸಚಿವರ ವೇತನ 40,000 ರು., ದಿನ ಭತ್ಯೆ ಸೇರಿದಂತೆ ವಿವಿಧ ಭತ್ಯೆಗಳು ಸೇರಿ ಮಾಸಿಕ 3 ಲಕ್ಷ ರು., ಮನೆ ಬಾಡಿಗೆ 80,000 ರು., 1 ಸಾವಿರ ಲೀಟರ್ ಡೀಸೆಲ್ /ಪೆಟ್ರೋಲ್ ಭತ್ಯೆ ನೀಡಲಾಗುತ್ತದೆ. ಇದರಲ್ಲಿ ಪ್ರಯಾಣ ಮತ್ತು ದಿನ ಭತ್ಯೆ ಬಿಟ್ಟು ಉಳಿದೆಲ್ಲಾ ಭತ್ಯೆಗಳಲ್ಲಿ ಶೇ.30ರಷ್ಟು ಕಡಿತ ಮಾಡಲಾಗುತ್ತದೆ.